## ಸ್ಕೈಪ್ 5

ಐಫೋನ್‌ನ ಈ ಆ್ಯಪ್ ಅತ್ಯುತ್ತಮವಾದ ದೃಶ್ಯ ಮತ್ತು ಶ್ರವ್ಯ ಗುಣಮಟ್ಟವನ್ನು ಹೊಂದಿದೆ. ಸರಳವಾದ ಹಾಗೂ ಸ್ವಚ್ಛವಾದ ಮೇಲ್ಮೈ ಹೊಂದಿದ್ದು ಕಾರ್ಯ ನಿರ್ವಹಣೆ ವೇಗವಾಗಿದೆ. ಸಮೂಹ ಚ್ಯಾಟ್ ಸವಲತ್ತಿದೆ. ಬೇರೆ ವೇದಿಕೆಗಳ ಸ್ಕೈಪ್ ಆ್ಯಪ್ ಜೊತೆ ಸಾಮರಸ್ಯವಿದೆ. ಟ್ಯಾಂಗೊ, ವೈಬರ್ ಅಥವಾ ಫೇಸ್‌ಬುಕ್ ಮೆಸೆಂಜರ್ ಸ್ಕೈಪ್‌ನ ಸಾಮರ್ಥ್ಯಕ್ಕೆ ಹತ್ತಿರವಾದರೂ ಅದರಷ್ಟು ಸಂಪೂರ್ಣ ಪ್ಯಾಕೇಜ್ ಕೊಡಲು ಸಾಧ್ಯವಿಲ್ಲ. ಇದು ವಿಡಿಯೋ ಕಾಲಿಂಗ್ ಸೌಲಭ್ಯ ಹೊಂದಿದ್ದು, ನಿಗದಿತ ಫೋನ್ ನಂಬರ್‌ಗಳಿಗೆ ವೈಸ್ ಕಾಲಿಂಗ್ ಕೂಡಾ ಲಭ್ಯ. ಗ್ರೂಪ್ ಕರೆ, ಗ್ರೂಪ್ ಚ್ಯಾಟಿಂಗ್, ವಿಡಿಯೊ ಹಾಗೂ ವೈಸ್ ಸಂದೇಶ, ಫೈಲ್ ವರ್ಗಾವಣೆ ಸೌಲಭ್ಯವಿದ್ದರೂ ಗ್ರೂಪ್ ವಿಡಿಯೊ ಚ್ಯಾಟಿಂಗ್ ಇಲ್ಲ. ಇದು ಆ್ಯಂಡ್ರಾಯ್ಡ್, ಬ್ಲ್ಯಾಕ್‌ಬೆರಿ, ಐಒಎಸ್, ಲಿನುಕ್ಸ್, ಮ್ಯಾಕ್, ವಿಂಡೋಸ್, ಎಕ್ಸ್‌ಬಾಕ್ಸ್ ಹಾಗೂ ಹಲವು ಸ್ಮಾರ್ಟ್ ಟಿ.ವಿ.ಗಳಲ್ಲಿ ಲಭ್ಯ.




## ಮೊಬ್ಲಿ

ಐ ಫೋನ್‌ನ ಈ ಸಾಮಾಜಿಕ ಜಾಲತಾಣದ ವಿಡಿಯೋ ಆ್ಯಪ್‌ನಿಂದ ಫೋಟೊ, ವಿಡಿಯೋ ಹಾಗೂ ಲೈವ್- ಸ್ಟ್ರೀಮಿಂಗ್ ವಿಡಿಯೊ ಪೋಸ್ಟ್ ಮಾಡಬಹುದು. ಇದು ವೈನ್ ಅನ್ನು ಹೋಲುತ್ತಿದ್ದರೂ ಕೇಲವ 6 ಸೆಕೆಂಡ್‌ಗಳ ವಿಡಿಯೋಗೆ ಸೀಮಿತಗೊಂಡಿಲ್ಲ. ಬದಲಾಗಿ ಲೈವ್ ಸ್ಟ್ರೀಮಿಂಗ್ ವಿಡಿಯೋ ಇದೆ. ಈ ಆ್ಯಪ್ ಅನ್ನು ನೀವು ಶುರು ಮಾಡಿದರೆ ಅದು ಮೊದಲು ನಿಮ್ಮ ಸ್ನೇಹಿತರ ಪಟ್ಟಿಯಲ್ಲಿರುವ ಮೊಬ್ಲಿ ಬಳಕೆದಾರರನ್ನು ಪತ್ತೆ ಮಾಡುತ್ತದೆ. ನಂತರ ನೀವು ವಿಡಿಯೋ ಪೋಸ್ಟ್ ಮಾಡಬಹುದು.




Google Drive

## ಗೂಗ್ಲ್ ಡ್ರೈವ್

ಹುಡುಕಾಟಕ್ಕೆ ಉಪಯುಕ್ತವಾದ ಡ್ರೈವ್. ಪಾಸ್‌ಕೋಡ್ ನಿಮ್ಮ ಆಯ್ಕೆಗೆ ಬಿಟ್ಟಿದ್ದು. ಆಫ್‌ಲೈನ್ ಫೈಲ್ ಸಂಗ್ರಹ ಸೌಲಭ್ಯವಿದೆ. ಫೋಟೊ ಹಾಗೂ ಇಮೇಜ್‌ಗಳನ್ನು ಅಪ್‌ಲೋಡ್ ಮಾಡಬಹುದು. ಗೂಗ್ಲ್‌ನ ಬಹು ಖಾತೆಗಳನ್ನು ಬೆಂಬಲಿಸುವ ಈ ಉಚಿತ ಡ್ರೈವ್ ಉಪಯುಕ್ತ ಥಂಬ್‌ನೇಲ್ ಹೊಂದಿದೆ. ಐಫೋನ್‌ನ ಇದು ಫೈಲ್ ಬ್ರೌಸರ್ ಆಗಿದ್ದು, ಕ್ಲೌಡ್‌ನಲ್ಲಿ ನೀವು ಸಂಗ್ರಹಿಸಿರುವ ಡಾಕ್ಯುಮೆಂಟ್‌ಗಳನ್ನು ನೋಡಲು ನೆರವು ನೀಡುತ್ತದೆ. ಆದರೆ ಈ ಫೈಲ್‌ಗಳನ್ನು ಸೃಷ್ಟಿಸಲು ಅಥವಾ ಎಡಿಟ್ ಮಾಡಲು ಬೇರೆ ಆ್ಯಪ್‌ಗಳ ಅಗತ್ಯವಿದೆ.




## ಅಡೋಬ್ ಫೋಟೊಶಾಪ್ ಮಿಕ್ಸ್

ಐಪ್ಯಾಡ್‌ನ ಈ ಉಚಿತ ಆ್ಯಪ್ ಕ್ಯಾಮೆರಾ ಅಲುಗಾಡಿದಾಗ ಆಗುವ ತಪ್ಪುಗಳನ್ನು ಸರಿಪಡಿಸುತ್ತದೆ. ಫೋಟೋದ ಕೆಲವು ಆಯ್ದ ಭಾಗಗಳಲ್ಲಿ ಫಿಲ್ಟರ್ ಅಳವಡಿಸಬಹುದು. ಸ್ಪಷ್ಟವಾದ ಹಾಗೂ ಸರಳವಾದ ಮೇಲ್ಮೈ. ಇದು ಅತ್ಯಂತ ಶಕ್ತಿಯುತವಾದ ಆದರೆ ಬಳಸಲು ಸರಳವಾದ ಟೂಲ್ ಹೊಂದಿದ್ದು ಇತರ ಫೋಟೊ ಎಡಿಟರ್ ಆ್ಯಪ್ ಹಾಗೂ ಲೈಟ್‌ರೂಂ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಕೊಲಾಜ್‌ಗಳನ್ನು ಸೃಷ್ಟಿಸಲು ಅಥವಾ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಜೊತೆ ಶೇರ್ ಮಾಡಿಕೊಳ್ಳಲು ಬಹಳ ಸುಲಭ. ಆದರೆ ಇದಕ್ಕೆ ಕ್ಲೌಡ್ ಚಂದಾದಾರರಾಗಿರಬೇಕು. ಇದನ್ನು ಐಟ್ಯೂನ್ಸ್ ಆ್ಯಪ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆದರೆ ಅಡೋಬ್ ಐಡಿಗೆ ಸೈನಪ್ ಆಗಬೇಕು.

■ ಎಸ್. ತುಂಬೆ